**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:**

ವಿಷಯ: ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಇತ್ತೀಚೆಗೆ ಸರ್ಕಾರದ ವತಿಯಿಂದ ಸಿಂಡಿಕೇಟ್ ಸದಸ್ಯರಾಗಿ ನಾಮ ನಿರ್ದೇಶನ ಮಾಡುವಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡು, ಅನನುಭವಿಗಳನ್ನು, ಸೂಕ್ತ ಉನ್ನತ ಶಿಕ್ಷಣದ ವಿದ್ಯಾರ್ಹತೆ, ಶ್ರೇಷ್ಠ ವ್ಯಕ್ತಿತ್ವ (eminent personalities) ಹಾಗೂ ಇತರ ಮಾನದಂಡಗಳನ್ನು ಅನುಸರಿಸದೆ ನಾಮ ನಿರ್ದೇಶನ ಮಾಡಿರುವುದರಿಂದ ವಿಶ್ವವಿದ್ಯಾನಿಲಯದ ಸ್ವಾಯತ್ತತೆ ಹಾಗೂ ಉತ್ತಮ ಆಡಳಿತಕ್ಕೆ ಅಡ್ಡಿ ಉಂಟಾಗಲಿರುವ ಗಂಭೀರ ಸಮಸ್ಯೆ ಕುರಿತು ಪ್ರಸ್ತಾಪಿಸಿರುತ್ತಾರೆ.

ಕರ್ನಾಟಕ ರಾಜ್ಯದಲ್ಲಿ, ಆಧುನಿಕ ವೈದ್ಯ ಪದ್ಧತಿ ಹಾಗೂ ಭಾರತೀಯ ವೈದ್ಯಪದ್ಧತಿಗಳಲ್ಲಿ ಸೂಕ್ತ ಮತ್ತು ವ್ಯವಸ್ಥಿತವಾದ ಶಿಕ್ಷಣ, ಬೋಧನೆ, ತರಬೇತಿ ಮತ್ತು ಸಂಶೋಧನೆಯನ್ನು ಖಚಿತಪಡಿಸುವ ಉದ್ದೇಶಕ್ಕಾಗಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು 1994 ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕಾಯ್ದೆಯುಲ್ಲಿನ ಅವಕಾಶಗಳನ್ವಯ ಸ್ಥಾಪಿತವಾಗಿ ಕಾರ್ಯನಿರ್ವಹಿಸುತ್ತಿದೆ.

ವಿಶ್ವವಿದ್ಯಾಲಯವು ಸುಗಮವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕೆಲವು ಪ್ರಾಧಿಕಾರಿಗಳನ್ನು ರಚಿಸಲಾಗಿದ್ದು, ಅವುಗಳ ಪೈಕಿ ಸಿಂಡಿಕೇಟ್ ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಾಹಕ ಪ್ರಾಧಿಕಾರವಾಗಿದೆ. ಸಿಂಡಿಕೇಟಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು ಶಾಸನಗಳ ಮೂಲಕ ನಿಯಮಿಸಬಹುದಾಗಿರುತ್ತದೆ. ಸಿಂಡಿಕೇಟ್‌ನಲ್ಲಿರುವ ಸದಸ್ಯರನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 1994ರ ಪ್ರಕರಣ 24ರಂತೆ ನೇಮಕ ಮಾಡಲು ಉಪಬಂಧ ಕಲ್ಪಿಸಲಾಗಿದ್ದು, ಪ್ರಕರಣ 24 (1)(ಬಿ)(x)ರನ್ವಯ ಸ್ವಾಯತ್ತ ಸರ್ಕಾರಿ ವೈದ್ಯಕೀಯ ಸಂಸ್ಥೆಯಿಂದ ಸರ್ಕಾರವು ವಾರ್ಷಿಕ ಸುತ್ತು ವರದಿಯಂತೆ ಒಬ್ಬರನ್ನು ಮತ್ತು ಪ್ರಕರಣ 24 (xii)ರಂತೆ ಆರೋಗ್ಯ ವಿಜ್ಞಾನಗಳ ಕ್ಷೇತ್ರದಲ್ಲಿನ ಪರಿಣಿತ ವ್ಯಕ್ತಿಗಳಿಂದ ರಾಜ್ಯ ಸರ್ಕಾರವು ಆರು ವ್ಯಕ್ತಿಗಳನ್ನು, ಈ ಕೆಳಕಂಡಂತೆ ನಾಮನಿರ್ದೇಶಿಸಲು ಉಪಬಂಧ ಕಲ್ಪಿಸಿದೆ.

i. ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿದ ಒಬ್ಬ ವ್ಯಕ್ತಿ;
ii. ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬ ವ್ಯಕ್ತಿ;
iii. ಒಬ್ಬ ಮಹಿಳೆ;
iv. ಭಾಷಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಒಬ್ಬ ವ್ಯಕ್ತಿ; ಮತ್ತು
v. ಇಬ್ಬರು ಇತರರು.

ಮೇಲ್ಕಂಡ ಉಪಬಂಧದಂತೆ, ವಿಶ್ವವಿದ್ಯಾಲಯದ ದಿನನಿತ್ಯದ ಆಡಳಿತ ಪಾರದರ್ಶಕವಾಗಿರಲು, ಸಾಮಾಜಿಕ, ನೈಸರ್ಗಿಕ ನ್ಯಾಯದ ಪರಿಪಾಲನೆಯಿಂದಾಗಿ ಆರೋಗ್ಯ ವಿಜ್ಞಾನದ ಕ್ಷೇತ್ರದಲ್ಲಿ ಶೈಕ್ಷಣಿಕ ಹಿರಿಮೆಯನ್ನು ಸಾಧಿಸಲು ಹಾಗೂ ಶಿಕ್ಷಣ ಗುಣಮಟ್ಟವನ್ನು ವೃದ್ಧಿಸಲು ಆರೋಗ್ಯ ವಿಜ್ಞಾನಗಳ ಕ್ಷೇತ್ರದಲ್ಲಿ ಪರಿಣಿತರಾಗಿರುವ ವೈದ್ಯಾಧಿಕಾರಿಗಳನ್ನು ನ್ಯಾಯೋಚಿತ ಹಾಗೂ ನಿಷ್ಪಕ್ಷಪಾತವಾಗಿ ಸಿಂಡಿಕೇಟ್‌ನ ಸದಸ್ಯರಾಗಿ ನಾಮನಿರ್ದೇಶನಗೊಳಿಸಲಾಗಿದೆ.

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಸಂಖ್ಯೆ:ಎಂಇಡಿ 18 ಆರ್‌ಜಿಯು 2023